ಇರುವುದಕ್ಕೆ ಏನಾದರೂ ಕಾರಣವಿರಬಹುದು. ಅಲ್ಲಿ ಕಟ್ಟದೆ ಇದ್ದರೆ ನಾನು ಇವತ್ತೇ ಅದನ್ನು ಪರಿಶೀಲಿಸಿ ಅಲ್ಲಿಗೆ ಹಣವಿಲ್ಲದೆ ಇದ್ದರೆ ಬಿಡುಗಡೆ ಮಾಡಿ ಕಟ್ಟುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇದಕ್ಕೆ ಇಲಾಖೆಯ ನಿರ್ಲಕ್ಷ್ಯವೇ ಹೊರತು ಇನ್ನೇನೂ ಕಾರಣವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಇದು ಇಲಾಖೆಯ ನಿರ್ಲಕ್ಷ್ಯವಲ್ಲ, ಈ ಕೆಲಸವನ್ನು ಜಿಲ್ಲಾ ಪಂಚಾಯಿತಿಯಿಂದ ಮಾಡಿಸಬಹುದಲ್ಲವೇ. ನೀವು ಜಿಲ್ಲಾ ಪಂಚಾಯಿತಿಯಲ್ಲಿ ಕುಳಿತಿರುತ್ತೀರಾ, ಸಮಯವನ್ನು ಉಪಯೋಗಿಸಿಕೊಂಡು ಈ ಕೆಲಸವನ್ನು ನೀವು ಮಾಡಿಸಿಕೊಳ್ಳಿ.

ಭಿಕ್ಷಾಟನೆಯನ್ನು ತಡೆಗಟ್ಟುವುದು

327(2751)

ಶ್ರೀ ಶಿವಪ್ಪ.ಬಿ.ಬಿ.(ಸಕಲೇಶಪುರ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರದಲ್ಲಿ ಹಾಗೂ ಪಟ್ಟಣ ಪ್ರದೇಶದಲ್ಲಿ ಹೆಚ್ಚಾಗಿ ಬೆಂಗಳೂರು ನಗರದಲ್ಲಿ ಜನರು ಭಿಕ್ಷಾಟನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಾಡಿಗೆದಾರರು ನಿಗಧಿಪಡಿಸಿದಂತೆ, ಒಂದು ದಿನಕ್ಕೆ ಹಣಕೊಟ್ಟು ಚಿಕ್ಕ ಚಿಕ್ಕ ಮಕ್ಕಳ ಕೈಯಲ್ಲಿ ಭಿಕ್ಷಾಟನೆ ಮಾಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಸುಳೆಗಳನ್ನು ಸೊಂಟಕ್ಕೆ ಕಟ್ಟಿಕೊಂಡು ಹೆಣ್ಣು ಮಕ್ಕಳುಗಳು ಭಿಕ್ಷೆ ಬೇಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ದೇವರ ಫೋಟೊಗಳ ಪ್ರತಿಗಳನ್ನು ಹಿಡಿದುಕೊಂಡು ಹಣ ಬೇಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಕುಷ್ಟರೋಗಿಗಳು ಎಂಬುದಾಗಿ ಮೇಲೆ ಕಟ್ಟುವ ಪಟ್ಟಿಯನ್ನು ಕಟ್ಟಿಕೊಂಡು ಹಣ ಬೇಡುವವರನ್ನು ಸರ್ಕಾರ ಗಮನಿಸಿದೆಯೇ?

ಊ) ಮೇಲ್ಕಂಡ ಭಿಕ್ಷಾಟನೆಯನ್ನು ತಡೆಗಟ್ಟಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಬಂದಿರುವುದಿಲ್ಲ.

ಇ) ಬಂದಿದೆ.

ಈ) ಬಂದಿದೆ.

ಉ) ಹೌದು.

ಊ) ಕರ್ನಾಟಕ ಭಿಕ್ಷಾಟನೆ ನಿಷೇಧ ಕಾಯಿದೆಯು ರಾಜ್ಯದ 10 ಜಿಲ್ಲೆಗಳಾದ 1) ಬೆಂಗಳೂರು 2) ಮೈಸೂರು 3) ಶಿವಮೊಗ್ಗ 4) ದಾವಣಗೆರೆ 5) ಬಿಜಾಪುರ 6) ಹುಬ್ಬಳ್ಳಿ - ಧಾರವಾಡ 7) ಬೆಳಗಾವಿ 8) ಬಳ್ಳಾರಿ 9) ಗುಲ್ಬರ್ಗಾ ಮತ್ತು 10) ಮಂಗಳೂರುಗಳಲ್ಲಿ ಜಾರಿಯಲ್ಲಿದ್ದು, ಸದರಿ ಕಾಯಿದೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸರ್ಕಾರವು ಅಧಿಸೂಚನೆ ಸಂ: ಎಸ್‌ಡಬ್ಲ್ಯೂಡಿ 15 ಎಸ್‌ಬಿಆರ್ 97 ದಿನಾಂಕ: 28-8-1997ರಲ್ಲಿ ರಾಜ್ಯಾದ್ಯಂತ ವಿಸ್ತರಿಸಲಾಗಿದೆ. ಹಾಗೂ 10 ಜಿಲ್ಲೆಗಳಲ್ಲದೆ ರಾಜ್ಯದ ತುಮಕೂರು ಕೋಲಾರ, ರಾಯಚೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ನಿರಾಶ್ರಿತರ ಪರಿಹಾರ ಕೇಂದ್ರಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಭಿಕ್ಷಾಟನೆ ನಿಷೇಧ ಕಾಯಿದೆಯನ್ವಯ 16 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರನ್ನು ಮತ್ತು 18 ವರ್ಷಕ್ಕಿಂತ ಮೇಲ್ಪಟ್ಟ ಪುರುಷರನ್ನು ಮಾತ್ರ ಬಂಧಿಸಲಾಗುತ್ತಿದೆ. ಭಿಕ್ಷಾಟನೆಯನ್ನು ನಿರ್ಮೂಲನೆಗೊಳಿಸುವ ಉದ್ದೇಶದಿಂದಾಗಿ ಭಿಕ್ಷಾ ವೃತ್ತಿಯಲ್ಲಿರುವವರನ್ನು ಬಂಧಿಸಿ ನಿಯಮಾನುಸಾರ ತಾಲ್ಲೂಕು ದಂಡನಾಧಿಕಾರಿಗಳ ಆದೇಶದಂತೆ ನಿಗಧಿಗೊಳಿಸಿದ ಅವಧಿಯಲ್ಲಿ ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿಡಲಾಗುತ್ತಿದೆ. ಈ ಅವಧಿಯಲ್ಲಿ ಅವರುಗಳಿಗೆ ಉಚಿತ ಊಟ, ಉಪಾಹಾರ, ವಸ್ತ್ರ, ವಸತಿ ಸೌಕರ್ಯಗಳಲ್ಲದೆ ಉಚಿತ ವೈದ್ಯಕೀಯ ಸೌಲಭ್ಯ ಕಲ್ಪಿಸಲಾಗುತ್ತಿದೆ. ದೃಢಕಾಯರಿಗೆ ಮರಗೆಲಸ, ಕಮ್ಮಾರಿಕೆ, ಬೆತ್ತ ಹೆಣಿಗೆ, ನಾರು ನೇಯ್ಗೆ, ಹೊಲಿಗೆ, ಬುಕ್ ಬೈಂಡಿಗ್ ವೃತ್ತಿಗಳಲ್ಲಿ ತರಬೇತಿ ನೀಡಲಾಗುತ್ತಿದೆ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಅಧ್ಯಕ್ಷರೆ, ಕರ್ನಾಟಕ ಭಿಕ್ಷಾಟನೆ ನಿಷೇಧ ಕಾಯಿದೆಯು ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಜಾರಿಯಲ್ಲಿ ಇದೆ ಎಂದು ಮಾನ್ಯ ಮಂತ್ರಿ ಯವರು ಹೇಳಿದ್ದಾರೆ. ಸರ್ಕಾರದವರು ಕಾಯಿದೆಯನ್ನು ಮಾಡಿದ್ದಾರೆ, ಆದರೆ ಅದು ಅಷ್ಟು ಪರಿಣಾಮಕಾರಿಯಾದ ಕಾರ್ಯಕ್ರಮವಾಗಲಿಲ್ಲ. ಇದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿ ಮಾಡುವುದಕ್ಕೋಸ್ಕರ ಒಂದು ಅಧಿಸೂಚನೆ ಮೂಲಕ ದಿ. 28-8-1997ರಲ್ಲಿ ರಾಜ್ಯದಾದ್ಯಂತ ಈ ಒಂದು ಕಾನೂನನ್ನು ಜಾರಿ ಮಾಡಿದ್ದೀರಿ; ಅದೂ ಕೂಡ

ಪರಿಣಾಮಕಾರಿಯಾಗಲಿಲ್ಲ. ತಾವು ಮತ್ತೊಂದು ಪ್ರಶ್ನೆಗೆ 18 ವರ್ಷಕ್ಕಿಂತ ಮೇಲ್ಪಟ್ಟ ಪುರುಷರು, 16 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರನ್ನು ಮಾತ್ರ ಬಂಧಿಸಲಾಗುತ್ತದೆ ಎಂದು ಉತ್ತರವನ್ನು ಕೊಟ್ಟಿದ್ದೀರಿ. ಆದರೆ ಭಿಕ್ಷಾಟನೆಯನ್ನು ಮಾಡುವವರಲ್ಲಿ 16ರಿಂದ 18 ವರ್ಷಕ್ಕಿಂತ ಕಡಿಮೆ ವಯಸ್ಸು ಇರುವವರೇ ಆಗಿರುತ್ತಾರೆ. ಇದನ್ನು ತಾವು ಗಮನಿಸಲಿಲ್ಲವೆಂದು ಹೇಳುತ್ತೀರಿ. ಇಲ್ಲಿ ನನಗೆ ಉತ್ತರವನ್ನು ಕೊಟ್ಟಿದ್ದೀರಿ, ಬಾಡಿಗೆದಾರನು ನಿಗಧಿಪಡಿಸಿದಂತೆ ಒಂದು ದಿನಕ್ಕೆ ಹಣಕೊಟ್ಟು ಚಿಕ್ಕಮಕ್ಕಳನ್ನು ಭಿಕ್ಷಾಟನೆಗೆ ಕಳುಹಿಸುತ್ತಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿಲ್ಲವೆಂದು ತಾವು ಹೇಳುತ್ತೀರಿ. ಈಗ ನಾನು ತಮ್ಮ ಗಮನಕ್ಕೆ ಈ ವಿಷಯವನ್ನು ತರುತ್ತಿದ್ದೇನೆ, ಈ ವ್ಯವಸ್ಥೆಯು ನಡೆಯುತ್ತಿದೆ, ಇದನ್ನು ಪರಿಣಾಮಕಾರಿಯಾಗಿ ನಿಷೇಧ ಮಾಡಲಿಕ್ಕೆ, ಬಹುತೇಕವಾಗಿ ಬಸ್‌ಸ್ಟ್ಯಾಂಡ್ ರೈಲ್ವೆ ನಿಲ್ದಾಣಗಳಲ್ಲಿ ಅಧಿಕಾರಿಗಳು ಏನಿದ್ದಾರೆ ಇವರು ಕಟ್ಟುನಿಟ್ಟಾಗಿ ಕ್ರಮಗಳನ್ನು ತೆಗೆದುಕೊಂಡರೆ ಇದನ್ನು ಸ್ವಲ್ಪ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯ ಎಂದು ನನ್ನ ಅಭಿಪ್ರಾಯ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನವನ್ನು ಹರಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಹಿಂದೆ ಕಾನೂನನ್ನು ಮಾಡುವಾಗ 16 ವರ್ಷದ ಕೆಳಗಿನ ಮಕ್ಕಳನ್ನು ಈ ಕಾನೂನಿನ ವ್ಯಾಪ್ತಿಯೊಳಗೆ ತಂದಿಲ್ಲ. ಕಾರಣವೇನೆಂದರೆ ಬಾಲ ಅಪರಾಧಿಗಳ ಕಾನೂನು ನಮ್ಮಲ್ಲಿ ಇದೆ. ಇದು ಅದರ ವ್ಯಾಪ್ತಿಯಲ್ಲಿ ಬರುತ್ತದೆ. ಈ ವಿಷಯವನ್ನು ನಾನು ಇತ್ತೀಚೆಗೆ ಪರಿಶೀಲನೆಯನ್ನು ಮಾಡಿದಾಗ, ಇದನ್ನು ನೋಡಿದ್ದೇನೆ. ಮಕ್ಕಳೇ ಹೆಚ್ಚಾಗಿ ಭಿಕ್ಷಾಟನೆಯನ್ನು ಮಾಡುತ್ತಿರುವಂತಹ ಪರಿಸ್ಥಿತಿ ಇರುವುದರಿಂದ, ಇದನ್ನು ನಿಗ್ರಹಿಸುವುದಕ್ಕೆ ಏನು ಮಾಡಬೇಕೆಂಬುದರ ಬಗ್ಗೆ ಚರ್ಚೆ ಮಾಡಿದಾಗ ಈ ಅಂಶ ಹೊರಬಂತು. ಈಗಾಗಲೇ ಇನ್ನೊಂದು ಕಾನೂನು ಇರುವುದರಿಂದ ಮತ್ತೆ ಡ್ಯೂಯಲ್ ಆಗುತ್ತದೆಂಬ ಪ್ರಶ್ನೆ ಬಂದಿದೆ. ಆದರೂ ಕೂಡ ಪೋಲೀಸ್ ಇಲಾಖೆಯವರು ಮತ್ತು ನಮ್ಮ ಇಲಾಖೆಯವರು ಒಟ್ಟು ಜಂಟಿಯಾಗಿ ಈ ಕೆಲಸವನ್ನು ಮಾಡಿದರೆ, ಅವರು ಬಾಲಪರಾಧಿಗಳು ಇದ್ದರೂ ಕೂಡ ಇದರ ವ್ಯಾಪ್ತಿಯಲ್ಲಿ ತಂದು ತನ್ಮೂಲಕ ಅವರನ್ನು ಜ್ಯುಯನೆಲ್ ಅಫೆಂಡರ್ಸ್ ಹೋಮ್‌ಗೆ ಕಳುಹಿಸುವಂತಹ ವ್ಯವಸ್ಥೆ ಮಾಡುತ್ತೇವೆ. ಈ ಬಾಲಪರಾಧಿಗಳು ಹೋಗಿಲ್ಲ, ಸದ್ಯಕ್ಕೆ ನಾವು ಬೆಂಗಳೂರನ್ನು ಪ್ರಧಾನವಾಗಿಟ್ಟುಕೊಂಡು ಇದನ್ನು ಭಿಕ್ಷಾಟನಾ ರಹಿತವಾದಂತಹ ಪ್ರದೇಶವನ್ನಾಗಿ ಮಾಡಬೇಕೆನ್ನುವುದಕ್ಕೆ ಒಂದು ವಿಶೇಷವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಅದರಲ್ಲಿ ನಗರಪಾಲಿಕೆಯವರು, ಪೋಲೀಸ್ ಇಲಾಖೆಯವರು ಮತ್ತು ನಮ್ಮ ಸಮಾಜಕಲ್ಯಾಣ ಇಲಾಖೆಯವರು ಜಂಟಿಯಾಗಿ ಒಂದು ಕಾರ್ಯಾಚರಣೆಯನ್ನು ಮಾಡುತ್ತೇವೆ. ಇದರ ಜೊತೆಗೆ ತಾಲ್ಲೂಕಿನ ಹಾಗೂ ರಾಜ್ಯದ ಜಿಲ್ಲಾ ಭಾಗಗಳಲ್ಲಿಯೂ ಕೊನೆಯ ಪಕ್ಷ ನಗರಪ್ರದೇಶಗಳಲ್ಲಿ ತಾವು ಹೇಳಿದ ಹಾಗೆ ಬಸ್‌ಸ್ಟ್ಯಾಂಡ್, ಸಾರ್ವಜನಿಕವಾದ ಸ್ಥಳಗಳಲ್ಲಿ ಭಿಕ್ಷಾಟನೆಯನ್ನು

ನಿಗ್ರಹಿಸುವುದಕ್ಕೆ ನಮ್ಮ ರಕ್ಷಣಾ ಇಲಾಖೆಯವರ ಸಹಾಯವನ್ನು ಪಡೆಯುವುದಕ್ಕೆ ವಿಶೇಷವಾದ ಪ್ರಯತ್ನವನ್ನು ಮಾಡುತ್ತೇವೆ. ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕೂಡ ಒಂದು ಸಮಿತಿಯನ್ನು ಕೂಡ ಮಾಡಿದ್ದೇವೆ. ಅದನ್ನು ಇನ್ನಷ್ಟು ಕ್ರಿಯಾಶೀಲವಾಗುವ ರೀತಿಯಲ್ಲಿ ಮಾಡಲು ನಾವು ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಕಾಗೋಡು ತಿಮ್ಮಪ್ಪನವರು ಭಿಕ್ಷಾಟನೆಯನ್ನು ತಡೆಗಟ್ಟುವ ಸಲುವಾಗಿ ಪರಿಣಾಮಕಾರಿಯಾಗಿ ಕಾರ್ಯಕ್ರಮಗಳನ್ನು ಇಂಪ್ಲಿಮೆಂಟ್ ಮಾಡುತ್ತೇವೆಂದು ಹೇಳಿದರು. ನಾವು ಇದರ ಬಗ್ಗೆ ಎಷ್ಟು ತಿಳಿದುಕೊಂಡಿದ್ದೇವೆ ಅಷ್ಟು ಪರಿಣಾಮಕಾರಿಯಾಗಿ ಇದು ಆಗುತ್ತಿಲ್ಲ. ಹುಬ್ಬಳ್ಳಿ - ಧಾರವಾಡ ಮತ್ತು ಬೆಂಗಳೂರು ಕಾರ್ಪೊರೇಷನ್‌ಗಳಲ್ಲಿ ಎಲ್ಲಾ ಕಡೆ ಭಿಕ್ಷುಕರು ಎಂದು ಹೇಳಿಕೊಂಡು ಹಣವನ್ನು ವಸೂಲು ಮಾಡುತ್ತಾರೆ. ಇದು ಆ ಕಲಂನಲ್ಲಿ ಇದೆ, ಈ ಹಣವು ಅವರ ಸಲುವಾಗಿಯೇ ಉಪಯೋಗವಾಗಬೇಕು. ಈ ಬೆಗ್ಗರ್ಸ್‌ಗಳಿಂದಾಗಿ ಲಕ್ಷಾಂತರ ರೂಪಾಯಿಗಳು ಕಲೆಕ್ಷನ್ ಆಗುತ್ತಿದೆ, ಅದನ್ನು ಬೇರೆ ರೀತಿಯಲ್ಲಿ ಉಪಯೋಗಿಸುತ್ತಿದ್ದಾರೆ. ಅದು ಯೂಸ್ ಆಗುವುದೇ ಇಲ್ಲ. ಅಲ್ಲಿ ಊರೊಳಗೆ ಭಿಕ್ಷುಕರು ನಿರ್ವಸತಿ ಪರಿಹಾರ ಕೇಂದ್ರವನ್ನು ಮಾಡಿದ್ದಾರೆ, ಅಲ್ಲಿ 4-5 ಜನ ಭಿಕ್ಷುಕರು ಇರುವುದಿಲ್ಲ, ಅದಕ್ಕೆ ಇದರ ಬಗ್ಗೆ ಸರ್ಕಾರದವರು ಏನು ಪಾಲಿಸಿಯನ್ನು ಮಾಡಿಕೊಂಡಿದ್ದಾರೆ ಅದು ಸರಿಯಾಗಿ ಅನುಷ್ಠಾನವಾಗುತ್ತಿಲ್ಲ, ಇದರ ಬಗ್ಗೆ ತಾವು ತೀವ್ರವಾದಂತಹ ಕ್ರಮವನ್ನು ಕೈಗೊಂಡು, ಬೆಗ್ಗರ್ಸ್‌ಗಳ ಹಣ ಅವರ ಸಲುವಾಗಿಯೇ ಉಪಯೋಗವಾಗುವ ರೀತಿಯಲ್ಲಿ ತಾವು ಯೋಜನೆಗಳನ್ನು ನಿರೂಪಣೆ ಮಾಡಿದರೆ ಒಳ್ಳೆಯದಾಗುತ್ತದೆ, ತಾವು ಅದನ್ನು ಅನುಷ್ಠಾನ ಮಾಡಬೇಕೆಂದು ನನ್ನ ವಿನಂತಿ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವಂಥದ್ದು ನಿಜ. ಈ ಕರ ವಸೂಲಿ ಮಾಡುವ ಕೆಲಸವನ್ನು ಪ್ರತಿಯೊಂದು ನಗರಸಭೆಯವರು ಮಾಡುತ್ತಾರೆ. ಅವರು ವಸೂಲಿ ಮಾಡಿದಂತಹ ಹಣವನ್ನು ನಮಗೆ ಜಮಾ ಮಾಡುವುದಿಲ್ಲ. ಅವರು ಬೇರೆಯದಕ್ಕೆ ಉಪಯೋಗ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಬೆಂಗಳೂರು ಮಹಾನಗರಪಾಲಿಕೆಯವರು ಸುಮಾರು 6 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ನಾನು ಕೂಡ ಮೊನ್ನೆ ದಿನ ಅಧಿಕಾರಿಗಳನ್ನು ಕರೆಸಿ ಇದೇನು ಈ ರೀತಿ ಮಾಡಿದ್ದೀರಿ ಎಂದು ಕೇಳಿದ್ದೇನೆ. ನಮ್ಮ ಹಣವನ್ನು ಅವರು ವಸೂಲಿ ಮಾಡಿದ್ದಾರೆ, ವಸೂಲಿ ಮಾಡಿರುವ ಹಣವನ್ನು ಖರ್ಚು ಮಾಡಿದ್ದಾರೆ, ಇದರ ಬಗ್ಗೆ ಕೇಳಿದರೆ ನಮ್ಮ ಹತ್ತಿರ ಹಣವಿಲ್ಲವೆಂದು ಹೇಳುತ್ತಾರೆ. ಈ ರೀತಿಯಾಗಿ ವಸೂಲಿ ಮಾಡಿದಂತಹ ಹಣವನ್ನು ತಕ್ಷಣ ಒಂದು ಹೆಡ್‌ಆಫ್ ಅಕೌಂಟ್‌ಗೆ ಜಮಾ ಮಾಡುವುದಕ್ಕೆ ಒಂದು ಸುತ್ತೋಲೆಯನ್ನು ನಾನು ಹೊರಡಿಸುತ್ತೇನೆ, ಇದಕ್ಕಾಗಿ ಕಾನೂನಿನೊಳಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ದುರದೃಷ್ಟವಶಾತ್ ಅದನ್ನು ನಾವು ಇನ್ನು ಜಾರಿಗೆಕೊಟ್ಟಿಲ್ಲ, ಮೊನ್ನೆ ನಾನು ಇದರ ಬಗ್ಗೆ

ಓದಿ ನೋಡಿದಾಗ ಈ ಲೋಪವಿರುವುದು ಗೊತ್ತಾಯಿತು. ಆ ಕಾರಣಕ್ಕಾಗಿ ಹೀಗಾಗುತ್ತಿದೆ, ಅದನ್ನು ಸರಿ ಮಾಡುತ್ತೇವೆ. ಇದರ ಜೊತೆಗೆ ತಾವು ಹೇಳಿದ ರೀತಿಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ, ಪುನರ್‌ವಸತಿ ಕೇಂದ್ರಗಳು ಇಲ್ಲ. ಇದು ಕೆಲವು ಜಿಲ್ಲೆಗಳಲ್ಲಿ ಇದೆ ಮತ್ತೆ ಕೆಲವು ಜಿಲ್ಲೆಗಳಲ್ಲಿ ಇಲ್ಲ. ಎಲ್ಲೆಲ್ಲಿ ಈ ಪುನರ್‌ವಸತಿ ಕೇಂದ್ರಗಳು ಇಲ್ಲವೋ ಅಲ್ಲಿ ಜಮೀನನ್ನು ಪಡೆದು ಈ ವರ್ಷ ಕನಿಷ್ಠ ಅರ್ಧಭಾಗದ ಜಿಲ್ಲೆಯಲ್ಲಾದರೂ ಕೂಡ ಪುನರ್‌ವಸತಿ ಕೇಂದ್ರವನ್ನು ಸ್ಥಾಪನೆ ಮಾಡಬೇಕು ಮತ್ತು ತಾವು ಹೇಳಿದ ರೀತಿಯಲ್ಲಿ ಹುಬ್ಬಳ್ಳಿಯಲ್ಲಿಯೂ ಕೂಡ ಅದನ್ನು ಇನ್ನಷ್ಟು ಪುನರ್‌ಸಂಘಟನೆಯನ್ನು ಮಾಡಿ ನಗರಪ್ರದೇಶಗಳಲ್ಲಿ ಏನಾದರೂ ಕ್ರಮ ತೆಗೆದುಕೊಂಡು ಇದನ್ನು ನಿಗ್ರಹಿಸುವುದಕ್ಕೆ ಒಂದು ಹೋರಾಟವನ್ನು ಮಾಡಬೇಕಾಗಿದೆ.

ಶ್ರೀ ಕೆ.ಶ್ರೀನಿವಾಸಗೌಡ ಕುದವನಹಳ್ಳಿ: ಮಾನ್ಯ ಅಧ್ಯಕ್ಷರೆ, ಈ ಪುನರ್‌ವಸತಿಯು ಯಾವ ದಿಕ್ಕಿನಲ್ಲಿ ಆಗಬೇಕೆಂದರೆ ನಾನು ಇದರ ಬಗ್ಗೆ ಲಂಡನ್‌ನಲ್ಲಿ ನೋಡಿದ್ದೇನೆ. ಸೀನಿಯರ್ ಸಿಟಜನ್ಸ್‌ಗೆ 65 ವರ್ಷಗಳಾದ ಮೇಲೆ ಅವರುಗಳಿಗೆ ಮನೆಗಳನ್ನು ಕೊಟ್ಟು ವಾರಕ್ಕೆ ಇಷ್ಟು ಎಂದು ಭತ್ಯೆಯನ್ನು ಕೊಡುತ್ತಾರೆ. ಈ ಭಿಕ್ಷುಕರಿಗೂ ಕೂಡ ಬಟ್ಟೆ ಕೊಟ್ಟು ಊಟ ಹಾಕಿದರೂ ಸಾಲದು, ಅವರಿಗೆ ಒಂದಿಷ್ಟು ಭತ್ಯೆಯನ್ನು ಕೊಟ್ಟಿದ್ದೇ ಆದರೆ ಈ ಭಿಕ್ಷಾಟನೆಯನ್ನು ತಪ್ಪಿಸಬಹುದು ಎಂದು ನನ್ನ ಒಂದು ಅನಿಸಿಕೆಯಾಗಿದೆ. ಎರಡನೆಯದಾಗಿ ಭಿಕ್ಷುಕರೆಲ್ಲರೂ ಬಡವರೇ ಅಲ್ಲ, ನಮ್ಮ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಸುಮಾರು 3 ಲಕ್ಷ ರೂಪಾಯಿಯ ಬಂಗಾರದ ಪಾತ್ರೆಯನ್ನು ಭಿಕ್ಷೆ ಬೇಡುವುದಕ್ಕೆ ಒಬ್ಬ ಭಿಕ್ಷುಕನು ಇಟ್ಟುಕೊಂಡಿದ್ದಾನೆ. ಅವರು ಭಿಕ್ಷುಕರಾಗಿ ಹುಟ್ಟಿರುವುದರಿಂದ, ಭಿಕ್ಷಾಟನೆ ಮಾಡುವುದೇ ಅವನ ವೃತ್ತಿಯಾಗಿದೆ. ಇವತ್ತು ಕೂಡ ಪತ್ರಿಕೆಗಳಲ್ಲಿ ಲೋಕಲ್ ಪತ್ರಿಕೆಗಳೆಲ್ಲೆಲ್ಲಾ ಈ ಬಗ್ಗೆ ಬಂದಿದೆ. ಕೆಲವು ಭಿಕ್ಷುಕರು ಹಿಂದಿನ ಪದ್ದತಿಯಂತೆ ಏನು ನಡೆದುಕೊಂಡು ಬಂದಿತ್ತೋ ಅದನ್ನು ಅನುಸರಿಸಿ ಇವತ್ತು ಕೂಡ ವರ್ಷಕ್ಕೆ ಒಂದು ಸಾರಿ, ಎರಡು ಸಾರಿ, ಭಿಕ್ಷಾಟನೆಯನ್ನು ಮಾಡುವಂತಹ ಸಾಹುಕಾರ ಭಿಕ್ಷುಕರು ಸಹ ಇದ್ದಾರೆ. ಇದು ಎರಡನೆಯದು. ಇನ್ನು ಮೂರನೆಯದು, ಎಂದರೆ ನಾನು ಹೋದ ಸಾರಿ ಹೇಳಿದ್ದೇನೆ ಏನೆಂದರೆ, ಕ್ಲಿಂಟನ್ ಅವರು ಬಂದಾಗ ಬಹಳ ಜನ ಭಿಕ್ಷುಕರು ಬಾರ್ಡರ್ ಜಿಲ್ಲೆಗಳಿಗೆ ಬಂದುಬಿಟ್ಟಿದ್ದಾರೆ. ಅವರೆಲ್ಲ ಆಂಧ್ರದಿಂದ ಬಂದಿದ್ದಾರೆ. ಅವರನ್ನು ತಿರುಗಿ ಆಂಧ್ರಕ್ಕೆ ಕಳಿಸುವುದಕ್ಕೆ ಏನಾದರೂ ತೀರ್ಮಾನ ತೆಗೆದುಕೊಂಡಿದ್ದೀರಾ? ಹಾಗೆ ತೆಗೆದುಕೊಂಡಿದ್ದರೆ ಅದರ ಬಗ್ಗೆ ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಶ್ರೀನಿವಾಸಗೌಡರು ಹೇಳಿದ ಹಾಗೆ, ನಾವು ಅದನ್ನು ಇಲ್ಲಿಯೇ ಕಾಣಬಹುದು. ಲಾಲ್‌ಬಾಗ್‌ನಿಂದ ಆ ಕಡೆಗೆ ಹೋಗುವಾಗ, ವಿದೇಶಿಯರು ಅಂತ ಕಂಡರೆ ಅವರ ಹಿಂದೆ ಕನಿಷ್ಠಪಕ್ಷ ಹತ್ತು ಜನ ಮಕ್ಕಳು ಸುತ್ತಾಡುತ್ತಾ ಇರುತ್ತಾರೆ. ಇದು ಅವರಿಗೂ ಒಂದು ರೀತಿಯ ಹಿಂಸೆ. ಅದರಿಂದ ನಮ್ಮ

ನಗರಕ್ಕೆ ಕೆಟ್ಟ ಹೆಸರು ತರತಕ್ಕದ್ದು ಇದೆ. ಎರಡನೆಯದು ಅವರು ಏನು ಹೇಳುತ್ತಿದ್ದಾರೆ ಎಂದರೆ ಅವರಿಗೆ ವಸತಿಗಳನ್ನು ಮಾಡುತ್ತೇವೆ ಎಂದು. ಎಲ್ಲರೂ ಕೈಯಲ್ಲಿ ಆಗದೇ ಇರುವವರು ಮಾತ್ರ ಭಿಕ್ಷೆ ಬೇಡುತ್ತಿಲ್ಲ. ಕೈಲಾಗುವವರು ಕೂಡ, ಎಲ್ಲ ಸರಿಯಾಗಿ ಇದ್ದಂತವರು, ಕೆಲಸ ಮಾಡತಕ್ಕಂಥವರೂ ಕೂಡ ಭಿಕ್ಷೆ ಬೇಡುತ್ತಿದ್ದಾರೆ. ಆದ್ದರಿಂದ ನೀವು ಆ ತರಹ ವ್ಯವಸ್ಥೆ ಮಾಡತಕ್ಕಂಥ ಸಂದರ್ಭದಲ್ಲಿ ವಿಸ್ತಾರವಾದ ಸರ್ಕಾರಿ ಜಾಗ ಎಲ್ಲಿದೆಯೆಂದು ನೋಡಿ ಅದನ್ನು ತೆಗೆದುಕೊಂಡು ಅಲ್ಲಿ ಸೂಕ್ತವಾದಂಥ ವ್ಯವಸಾಯವನ್ನು ಅವರಿಂದ ಮಾಡಿಸಿ. ಅದರ ಉತ್ಪನ್ನವನ್ನು ಅವರೇ ಅನುಭವಿಸುವಂಥ ವ್ಯವಸ್ಥೆ ಮಾಡಿದರೆ ಬಹುಶಃ ಅವರನ್ನು ಕೆಲಸಕ್ಕೆ ಹಚ್ಚಿದ ಹಾಗೂ ಆಗುತ್ತದೆ ಮತ್ತು ನಮ್ಮ ಸಂಪತ್ತು ಜಾಸ್ತಿಯಾಗುತ್ತದೆ. ಇದರಿಂದ ಭಿಕ್ಷಾಟನೆಯನ್ನು ನಿರ್ಮೂಲನ ಮಾಡುವುದಕ್ಕೆ ಅವಕಾಶ ಆಗುತ್ತದೆ. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ ಎಂದು ನಾನು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಶಿವಪ್ಪನವರು ಹೇಳಿರತಕ್ಕದ್ದು ನಿಜ ನಾವು ಬೆಂಗಳೂರು.....

ಶ್ರೀ ಕೆ.ಹೆಚ್.ರಂಗನಾಥ್: ಮಾಗಡಿ ರೋಡಿನಲ್ಲಿ ಬೆಗ್ಗರ್ಸ್ ಕಾಲೋನಿ ಇದೆ. ಮಾನ್ಯ ಬಸವಲಿಂಗಪ್ಪನವರು ಇದ್ದಾಗ ಕನಿಷ್ಟ ಅವರಿಗೆ ಒಂದೊಂದು ತಿಂಗಳು ಶಿಕ್ಷೆ ವಿಧಿಸಿ ಅವರನ್ನು ಕರೆದುಕೊಂಡು ಹೋಗಿ ಅಲ್ಲಿ ಕೆಲಸ ಮಾಡಿಸುತ್ತಿದ್ದರು. ಈಗ ಏನಾಗಿದೆಯೆಂದರೆ ಅಲ್ಲಿ ಹಾಗೆ ಕೆಲಸ ಮಾಡಿಸುತ್ತಿಲ್ಲ. ಅವರನ್ನು ಅಲ್ಲಿ ಕೆಲಸ ಮಾಡುವುದಕ್ಕೆ ಕಳಿಸಬೇಕು. ಭಿಕ್ಷೆ ಬೇಡುವುದು ಸುಲಭ. ಮಾನ್ಯ ಮಂತ್ರಿಗಳು ದಯಾವಂತರಾಗಿದ್ದಾರೆ. ಅವರಿಗೆ ಮನೆ ಕಟ್ಟಿಸಿಕೊಟ್ಟರೆ ಅದು ಆಗುವುದಿಲ್ಲ. ಅವರು ನೆಲ ಅಗೆಯಲಿ ವ್ಯವಸಾಯ ಮಾಡಲಿ. ಆಮೇಲೆ ಬೇಕಾದರೆ ಅವರಿಗೆ ಕೈಗಾರಿಕೆ ಕಲಿಸೋಣವಂತೆ. ಕನಿಷ್ಟ ಒಂದು ತಿಂಗಳು ಸಜೆ ಹೊರಡಿಸಿ ನಂತರ ಅವರನ್ನು ಅಲ್ಲಿ ಕೆಲಸ ಮಾಡುವುದಕ್ಕೆ ಹಾಕಬೇಕು, ಇಲ್ಲದಿದ್ದರೆ ಇದು ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಬೆಂಗಳೂರಿನಲ್ಲಿರತಕ್ಕಂಥ ಪರಿಹಾರ ಕೇಂದ್ರ ಇದೆಯಲ್ಲ, ಅಲ್ಲಿ ಸಾಕಷ್ಟು ಜಮೀನು ಇದೆ ಮತ್ತು ಅವರು ಉಳುಮೆಯನ್ನೂ ಮಾಡುತ್ತಿದ್ದಾರೆ. ಒಳ್ಳೆಯ ಕೃಷಿಯನ್ನು ಕೂಡ ಅಲ್ಲಿ ಮಾಡುತ್ತಿದ್ದಾರೆ. ಇನ್ನೂ ಹೆಚ್ಚಿನ ಪ್ರಮಾಣದ ಕೃಷಿ ಅಲ್ಲಿ ಮಾಡಬೇಕು. ಅಲ್ಲಿ ಇರತಕ್ಕಂಥ ಭೂಮಿ, ನೀರಿನ ಅನುಕೂಲ ನೋಡಿದರೆ ಅಲ್ಲಿ ಬಂಗಾರ ಬೆಳೆಯಬಹುದು ಆ ಸ್ಥಿತಿ ಇದೆ. ಮಾನ್ಯ ಶ್ರೀನಿವಾಸಗೌಡರು ಹೇಳಿದ ರೀತಿಯಲ್ಲಿ ತರಬೇತಿಯನ್ನು ಕೊಡುತ್ತೇವೆ. ತರಬೇತಿ ಕೊಡತಕ್ಕಂಥ ಕಾಲದಲ್ಲೆ ಪ್ರತಿದಿವಸ ಐದು ರೂಪಾಯಿಗಳ ಬಾಟಾ ಅವರಿಗೆ ಕೊಡುತ್ತೇವೆ. ಅವರು ಬಿಡುಗಡೆಯಾದಾಗ ಹಣವನ್ನು ಕೂಡ ಅವರ ಕೈಗೆ ಕೊಟ್ಟು ಕಳಿಸುತ್ತೇವೆ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ನಾವು ಶಾಸಕರ ಭವನದಿಂದ

ಇಲ್ಲಿಗೆ ಬರುವ ದಾರಿಯಲ್ಲಿ ಅಧಿವೇಶನವಿರುವಂತಹ ಸಮಯದಲ್ಲಿ ಒಬ್ಬ ಹೆಂಗಸು ಎರಡು ಸಣ್ಣ ಮಕ್ಕಳನ್ನು, ಒಂದಕ್ಕೆ ಎರಡು ವರ್ಷ, ಇನ್ನೊಂದಕ್ಕೆ ಮೂರು ವರ್ಷ, ಈ ಮಕ್ಕಳೊಡನೆ ಆಕೆ ಭಿಕ್ಷಾಟನೆ ಮಾಡುವುದನ್ನು ನಾವು ನೋಡುತ್ತೇವೆ. ದಯವಿಟ್ಟು ತಾವು ಇವತ್ತೇ ಈ ಬಗ್ಗೆ ಕಾರ್ಯಪ್ರವೃತ್ತರಾಗಬೇಕು. ಆ ಹೆಂಗಸನ್ನು ನೋಡಿದಾಗ ನಮಗೆ ಬೇಸರವಾಗುತ್ತದೆ. ಇದರ ಬಗ್ಗೆ ತಾವು ತಕ್ಷಣದ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ: ಖಂಡಿತ ಮಾಡುತ್ತೇನೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಹಿಂದಿನ ಮುಖ್ಯಮಂತ್ರಿಗಳು ಇದ್ದಾಗ ಈ ಭಿಕ್ಷಾಟನೆಯನ್ನು ಹೇಗೆ ತಡೆಯುವುದು ಎಂದು ಒಂದು ದೊಡ್ಡ ಸ್ಕೀಮ್ ಹಾಕಿ ಒಂದು ದಿವಸ ಪ್ರೋಗ್ರಾಮ್ ಮಾಡಿದ್ದೆವು. ಆಗ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದರು. ಈ ಭಿಕ್ಷಾಟನೆಯನ್ನು ಏನೋ ತಡೆಯಬಹುದು, ಆದರೆ ರಾಜಕೀಯ ಭಿಕ್ಷಾಟನೆಯನ್ನು ಹೇಗೆ ತಡೆಯುವುದು ಎಂದು ಹೇಳಿದ್ದರು.

ಅಧ್ಯಕ್ಷರು: ಆ ವಿಷಯ ಇಲ್ಲಿ ಬೇಡ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಈ ಬೆಗ್ಗರ್ಸ್ ಕಾಲೋನಿಯಲ್ಲಿ ಎಷ್ಟು ಜನ ಇದ್ದಾರೆ? ಅವರ ಸಂಖ್ಯೆಯನ್ನು ತಿಳಿಸಬೇಕು. ಬೆಳಿಗ್ಗೆ ಅವರನ್ನು ಕರೆದುಕೊಂಡು ಹೋಗಿ ಸಂಜೆವರೆಗೆ ಕೆಲಸ ಮಾಡಿಸುತ್ತಾರೆ. ನಮ್ಮಲ್ಲಿ ಹೈಕೋರ್ಟ್ ಮುಂದೆ ಮತ್ತು ಟ್ರಾಫಿಕ್ ಸಿಗ್ನಲ್ಸ್ ಹತ್ತಿರ ಇದು ವಿಪರೀತ ಇದೆ. ಮಹಾತ್ಮಗಾಂಧಿ ರಸ್ತೆಯಲ್ಲೂ ಇದ್ದಾರೆ. ಅದರಲ್ಲೂ ವಿದೇಶಿಯರು ಬಂದರೆ ಭಿಕ್ಷಾಟನೆ ತುಂಬಾ ಜಾಸ್ತಿಯಾಗುತ್ತದೆ. ಇದರ ಬಗ್ಗೆ ತಾವು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಮತ್ತು ಬೆಂಗಳೂರು ನಗರದ ಎಲ್ಲ ಶಾಸಕರುಗಳನ್ನು ಕರೆಸಿ ಒಂದು ಸಭೆಮಾಡಿ ಯಾವ ರೀತಿ ಇದನ್ನು ಕಡಿಮೆ ಮಾಡಬಹುದು ಎನ್ನುವುದನ್ನು ಇದುವರೆಗೂ ತಾವು ಯೋಚನೆ ಮಾಡಿದ ಹಾಗೆ ಇಲ್ಲ. ಆದ್ದರಿಂದ ದಯವಿಟ್ಟು ಶೀಘ್ರವಾಗಿ ಈ ಬಗ್ಗೆ ಯೋಚನೆ ಮಾಡಿ. ಬೆಂಗಳೂರು ಬೆಗ್ಗರ್ಸ್ ಸಿಟಿ ಆಗಬಾರದು. ಇದು ತುಂಬಾ ಜಾಸ್ತಿಯಾಗಿದೆ. ತಮ್ಮ ಇಲಾಖೆ ಇದುವರೆಗೂ ಇದರ ಬಗ್ಗೆ ಯೋಚ ಮಾಡಿಲ್ಲ. ಯಾವ ಟ್ರಾಫಿಕ್ ಸಿಗ್ನಲ್ಸ್ ಹತ್ತಿರ ನೋಡಿ, ಬರೀ ಭಿಕ್ಷುಕರು ಇರುತ್ತಾರೆ.

ಅಧ್ಯಕ್ಷರು: ಅವರು ಉತ್ತರ ಹೇಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ: ಈ ಬಗ್ಗೆ ಶಾಸಕರನ್ನು ಕರೆದು ಚರ್ಚೆ ಮಾಡುವ ಕೆಲಸವನ್ನು ನಾನು ಮಾಡುತ್ತೇನೆ. ಇದು ಒಳ್ಳೆಯ ಸಲಹೆ. ಬೆಂಗಳೂರು ನಗರವನ್ನು ಭಿಕ್ಷುಕರ ರಹಿತ ಪ್ರದೇಶವನ್ನಾಗಿ ಮಾಡುವುದಕ್ಕೆ ಈಗ ನಾವು ಪ್ರಾರಂಭ ಮಾಡಿದ್ದೇವೆ. ಕಳೆದ ಎಂಟು -ಹತ್ತು ದಿವಸಗಳಿಂದ ಈ ಕಾರ್ಯಾಚರಣೆಯನ್ನು ನಾವು ಮಾಡಿದ್ದೇವೆ.

ಇದಕ್ಕೆ ಬೇಕಾದಂಥ ಒಂದು ವ್ಯಾನು ವಗೈರೆ ಇಟ್ಟಿದ್ದೇವೆ. ಇದು ಇನ್ನು ಹದಿನೈದು ದಿವಸ ಅಥವಾ ಒಂದು ತಿಂಗಳು ತೆಗೆದುಕೊಳ್ಳಬಹುದು. ಆದರೂ ಕೂಡ ಮಾನ್ಯ ಸದಸ್ಯರನ್ನೆಲ್ಲ ಕರೆದು ಈ ವಿಚಾರದಲ್ಲಿ ಅವರ ಸಹಕಾರವನ್ನು ಪಡೆಯುವ ಪ್ರಯತ್ನವನ್ನು ನಾನು ಮಾಡುತ್ತೇನೆ. ನಮ್ಮ ರಿಲೀಫ್ ಕೇಂದ್ರದಲ್ಲಿ ಸುಮಾರು 450 ಜನರು ಇದ್ದಾರೆ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಸಭಾಧ್ಯಕ್ಷರೇ, ಇಲ್ಲಿ ಎರಡನೇ ಪ್ರಶ್ನೆಗೆ ಚಿಕ್ಕಮಕ್ಕಳ ಕೈಯಲ್ಲಿ ಭಿಕ್ಷಾಟನೆ ಮಾಡಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿರುವುದಕ್ಕೆ 'ಬಂದಿರುವುದಿಲ್ಲ' ಎಂದು ಮಾನ್ಯ ಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. ಎಂ.ಜಿ.ರೋಡಿಗೆ ಮಹಾತ್ಮಾಗಾಂಧಿಯವರ ಹೆಸರು ಇದೆ. ಅಲ್ಲಿ ಹೋಗಿ ಸಿಗ್ನಲ್‌ಲೈಟ್ ಬಳಿ ನಿಂತುಕೊಂಡಾಗ we feel guilty. ಕಾರು ಇರುವವರು ಕಪ್ಪು ಗ್ಲಾಸ್ ಸೇರಿಸಿಕೊಂಡು ಬಿಡುತ್ತಾರೆ. ಸ್ಕೂಟರ್‌ನಲ್ಲಿ ಓಡಾಡುವವರಿಗೆ ಕಷ್ಟ ಇದೆ. ಎಳೆ ಮಕ್ಕಳು ಕಂಡಕಂಡವರ ಕಾಲಿಗೆ ಬೀಳುವುದನ್ನು ನೋಡಿದಾಗ we feel guilty. ನೀವು ಹೇಳಿದ್ದೀರಿ, ಈಗ ಹತ್ತು ಜಿಲ್ಲೆಗಳಲ್ಲಿ ಈಗಾಗಲೇ ನಾವು ಭಿಕ್ಷಾಟನೆ ಕಾಯದೆಯನ್ನು ಜಾರಿಗೆ ತಂದಿದ್ದೇವೆ ಎಂದು. ಅದನ್ನು ಪರಿಣಾಮಕಾರಿಯಾಗಿ ಜಾರಿ ಮಾಡುವುದಕ್ಕೆ 1997ರಲ್ಲಿ ರಾಜ್ಯದಾದ್ಯಂತ ವಿಸ್ತರಿಸಲಾಗಿದೆಯೆಂದು ಹೇಳಿದ್ದೀರಿ. ಆದರೆ ಇದುವರೆಗೂ ಕೂಡ ಸರ್ಕಾರಕ್ಕೆ ಭಿಕ್ಷಾಟನೆಯನ್ನು ನಿರ್ಮೂಲನ ಮಾಡುವುದಕ್ಕೆ ಆಗಿಲ್ಲ. Beggars cannot be choosers. ಅದಕ್ಕೋಸ್ಕರ ಸರ್ಕಾರದ ಕೈಯಲ್ಲಿ ಭಿಕ್ಷಾಟನೆಯನ್ನು ನಿರ್ಮೂಲನೆ ಮಾಡುವುದಕ್ಕೆ ಆಗದೇ ಇರುವಾಗ ಈ ಭಿಕ್ಷಾಟನೆಯನ್ನು ಸಕ್ರಮಗೊಳಿಸುವುದಕ್ಕೆ, ರೆಗ್ಯುಲರೈಸ್ ಮಾಡುವುದಕ್ಕೆ, ಲೀಗಲೈಸ್ ಮಾಡುವುದಕ್ಕೆ ಏನಾದರೂ ಸರ್ಕಾರ ಯೋಚನೆ ಮಾಡುತ್ತದೆಯೇ?

ಶ್ರೀ ಕಾಗೋಡು ತಿಮ್ಮಪ್ಪ: ಅದು ಸಧ್ಯಕ್ಕಂತೂ ಇಲ್ಲ. ಇರತಕ್ಕಂಥ ಕಾನೂನನ್ನು ಯಶಸ್ವಿಯಾಗಿ ಜಾರಿಗೊಳಿಸಬೇಕು. ಕಾರಣ ಏನೆಂದರೆ ನಮ್ಮದೇ ಆದ ಸಿಬ್ಬಂದಿ ಪ್ರತಿಯೊಂದು ತಾಲ್ಲೂಕಿನಲ್ಲಿ ನಮ್ಮ ಇಲಾಖೆಯಲ್ಲಿ ಇಲ್ಲ. ಎಲ್ಲ ಪೊಲೀಸ್ ಇಲಾಖೆಯವರು ಈ ಕೆಲಸ ಮಾಡಬೇಕು, ಪುರಸಭೆಯವರು ಈ ಕೆಲಸ ಮಾಡಬೇಕಾಗುತ್ತದೆ. ನಾವು ಏನಿದ್ದರೂ ಅವರಿಗೆ ಅಸಿಸ್ಟೆನ್ಸ್ ಕೊಡುವುದು ಅಷ್ಟೆ. ನಮ್ಮದೇ ಆಗಿರತಕ್ಕಂಥ ಇನ್‌ಫ್ರಾಸ್ಟ್ರಕ್ಚರ್ ಇಲ್ಲ. ಅದಕ್ಕಾಗಿ ಇದು ಕಾಗ್ನಜಿಬಲ್ ಅಫೆನ್ಸ್ ಎಂದು ಇರುವಾಗ ಪೊಲೀಸಿನವರು ಅವರನ್ನು ಅರೆಸ್ಟ್ ಮಾಡಿ ಕಳಿಸಬಹುದು. ಇದು ಯಶಸ್ವಿಯಾಗಿ ಕಾರ್ಯಗತ ಆಗಿಲ್ಲ ಎನ್ನುವುದನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಇದನ್ನು ಯಶಸ್ವಿಯಾಗಿ ಮಾಡುವುದಕ್ಕೆ ವಿಶೇಷವಾಗಿ ನಮ್ಮ ಶಾಸಕ ಮಿತ್ರರ ಸಹಕಾರವನ್ನು ನಾನು ತೆಗೆದುಕೊಳ್ಳುತ್ತೇನೆ.